**ಸಿ.ಸಿ.ನಂ.: 1416/2025**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **06-03-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಪಾಟೀ ಸವಾಲು –ಆರೋಪಿ ಪರ ಶ್ರೀಮತಿ ಆರ್ ಜಿ ಎನ್ . ವಕೀಲರಿಂದ</u>**

ಈ ಪ್ರಕರಣದಲ್ಲಿ ಸಾಲವನ್ನು ಆರೋಪಿತರ ಉಳಿತಾಯ ಖಾತೆಗೆ ಹಾಕಿರುತ್ತೇನೆ. ಆರೋಪಿತಳ ಉಳಿತಾಯ ಖಾತೆಯನ್ನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲು ಯಾವುದೇ ತೊಂದರೆ ಇಲ್ಲ. ನಿಪಿ- 2ಎ ಹಾಗೂ 6ಎ ದಾಖಲಾತಿಯ ಸಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ-2 ರ ಬರೆವಣಿಗೆ ನಮ್ಮ ಫಿರ್ಯಾದಿ ಸಂಸ್ಥೆಯವರು ಮಾಡಿರುವುದು ಎಂದರೆ ಸಯಲ್ಲ. ನಿಪಿ-2ನ್ನು ಆರೋಪಿತಳು ಬರೆದಿರುವುದು ಇಲ್ಲ ಎಂದರೆ ಸರಿಯಲ್ಲ. ದಿಃ03.01.2025 ರಂದು ನಿಪಿ-2 ರಲ್ಲಿ ಬರೆದಿರುವಷ್ಟು ಹಣ ನಮಗೆ ಬರಲು ಬಾಕಿ ಇದೆ ಎಂಬ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತಳು ತೆಗೆದುಕೊಂಡ ಎಲ್ಲಾ ಸಾಲವನ್ನು ಮರುಪಾವತಿ ಮಾಡಿರುತ್ತಾಳೆ ಎಂದರೆ ಸಂರಿಯಲ್ಲ. ನಮ್ಮ ಫಿರ್ಯಾದಿ ಸಂಸ್ಥೆಯಿಂದ ಕಟ್ಟುಬಾಕಿ ಆರೋಪಿತಳಿಗೆ ಯಾವುದೇ ನೋಟಿಸನ್ನು ನೀಡಿಲಿಲ್ಲ ಎಂದರೆ ಸರಿಯಲ್ಲ. ಆರೋಪಿತಳಿಗೆ 2-3 ನೋಟಿಸನ್ನು ಕಳುಹಿಸುರುತ್ತೇವೆ. ಸದರಿ ನೋಟಿಸನ್ನು ಹಾಜರುಪಡಿಸಿರುವುದಿಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ